**ಕರ್ನಾಟಕ ಸರ್ಕಾರ**

**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ತರೀಕೆರೆ.**

**ಸಿ.ಸಿ.ನಂ. 647/2021**

ಪಿ.ಡಬ್ಲ್ಯೂ: 6

ಸಿ.ಡಬ್ಲ್ಯೂ: 6

ಸಾಕ್ಷಿದಾರರ ಹೆಸರು : ನಾಗರಾಜ್

ತಂದೆ ಹೆಸರು : ಸುಂದರ್ ಶೆಠ್

ವಯಸ್ಸು : **48 ವರ್ಷ**

ಉದ್ಯೋಗ : ಬಂಗಾರದ ವ್ಯಾಪಾರಿ

ವಾಸಸ್ಥಳ : ಲಕ್ಕವಳ್ಳಿ

**ದಿನಾಂಕಃ 10-11-2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು**

**ಮುಖ್ಯ ವಿಚಾರಣೆ :** ಸಹಾಯಕ ಸರ್ಕಾರಿ ಅಭಿಯೋಜಕರವರಿಂದ

ಸೆಪ್ಟೆಂಬರ್ ತಿಂಗಳ 2009 ನೇ ಇಸವಿಯಲ್ಲಿ ಲಕ್ಕವಳ್ಳಿಯ ಸರ್ಕಲ್ ಇನ್ಸಪೆಕ್ಟರ್ ಕರೆ ಮಾಡಿ ಸ್ಟೇಷನ್ ಹತ್ತಿರ ಬರಲು ಹೇಳಿದರು. ಅವರ ಕೋರಿಕೆಯ ಮೇರೆಗೆ ಠಾಣೆಗೆ ಹೋಗಿದ್ದು ಪೊಲೀಸರು ಬಂಗಾರದ ಒಡವೆಗಳನ್ನು ನೀಡಿ ಇದನ್ನು ಪರೀಕ್ಷಿಸಿ ಎಂದು ತಿಳಿಸಿದರು. ನಾನು ಪರೀಕ್ಷಿಸಿ ಪೊಲೀಸರು ನೀಡಿದ ಒಡವೆಗಳು ಬಂಗಾರದ ಒಡವೆಗಳು ಎಂದು ತಿಳಿಸಿದೆ. ಅದರಲ್ಲಿ 3 ಗ್ರಾಂ ಜುಮುಕಿ, ಒಂದು ಗ್ರಾಂನ ಪ್ಲೇಟ್, 3 ಗ್ರಾಂನ ಮೂರು ಸಣ್ಣ ಉಂಗುರಗಳು, 31 ಗ್ರಾಂನ ಒಂದು ಸರ ಇದ್ದವು. ಅವುಗಳನ್ನು ತೂಕ ಮಾಡಿ ಪರಿಶೀಲಿಸಿ, ಪೊಲೀಸರಿಗೆ ಅವುಗಳ ವಿವರಗಳನ್ನು ತಿಳಿಸಿದೆ.

ನ್ಯಾಯಾಲಯದ ಮುಂದೆ ಹಾಜರುಪಡಿಸಿದ 3 ಗ್ರಾಂ ಜುಮುಕಿ, ಒಂದು ಗ್ರಾಂನ ಪ್ಲೇಟ್, 3 ಗ್ರಾಂನ ಮೂರು ಸಣ್ಣ ಉಂಗುರಗಳು, 31 ಗ್ರಾಂನ ಒಂದು ಸರವನ್ನು ಸಾಕ್ಷಿ ನೋಡಿ ಗುರುತಿಸಿರುತ್ತಾರೆ.

**(ಈ ಹಂತದಲ್ಲಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು.)**

**ಪಾಟೀ ಸವಾಲುಃ** ಸಹಾಯಕ ಸರ್ಕಾರಿ ಅಭಿಯೋಜಕರವರಿಂದ

ದಿನಾಂಕಃ **18-09-2020** ರಂದು ಪೊಲೀಸರ ಕೋರಿಕೆಯ ಮೇರೆಗೆ ಕಳ್ಳತನವಾದ ಆಭರಣಗಳನ್ನು ಪಂಚರ ಮುಖಾಂತರ ನಾನು ಪರೀಕ್ಷೆ ಮಾಡಿ ಬಂಗಾರದ ಒಡವೆಗಳು ಎಂದು ತಿಳಿಸಿದ ನಂತರ ಈ

ಪ್ರಕರಣದಲ್ಲಿ ಪೊಲೀಸರು ಮಹಜರ್ ಕ್ರಮ ಜರುಗಿಸಿ ಸದರಿ ಒಡವೆಗಳನ್ನು ಅಮಾನತ್ತುಪಡಿಸಿಕೊಂಡಿರುತ್ತಾರೆ. ಒಟ್ಟು 12 ರಿಂದ 13 ಬಂಗಾರದ ಐಟಂ ಗಳನ್ನು ಪರಿಶೀಲಿಸಿ ವರದಿ ನೀಡಿರುತ್ತೇನೆ.

**<u>ಪಾಟೀ ಸವಾಲು : ಆರೋಪಿ ಪರ ವಕೀಲರಿಂದ.</u>**

ನನ್ನ ಹತ್ತಿರ ಬಂಗಾರದ ಅಂಗಡಿ ಇರುವ ಬಗ್ಗೆ ಯಾವುದೇ ದಾಖಲಾತಿಯನ್ನು ಪೊಲೀಸರಿಗೆ ನೀಡಿರುವುದಿಲ್ಲ. ಬಂಗಾರವನ್ನು ಪರಿಶೀಲಿಸಲು ಯಾವುದಾದರೂ ತರಭೇತಿ ಆಗಿದೆಯೇ ಎಂದರೆ ಸಾಕ್ಷಿ ನನ್ನ ಅನುಭವದ ಮೇಲೆ ಮಾಡಿರುತ್ತೇನೆಂದು ನುಡಿದಿರುತ್ತಾರೆ. ಸದರಿ ಒಡವೆಗಳನ್ನು ಓರೆ ಹಚ್ಚುವ ಕಲ್ಲಿನಿಂದ ಪರಿಶೀಲಿಸಿ, ಅಭಿಪ್ರಾಯವನ್ನು ನೀಡಿರುತ್ತೇನೆ. ಓರೆ ಹಚ್ಚಿ ಪರಿಶೀಲಿಸುವುದರಲ್ಲಿ ಬಂಗಾರದ ಸಂಪೂರ್ಣ ಮಾಹಿತಿ ತಿಳಿಯುವುದಿಲ್ಲ. ನಾನು ಪರಿಶೀಲಿಸಿದ ಬಂಗಾರದಲ್ಲಿ ಕೆಲವು ಒಡವೆಗಳನ್ನು ಈಗ ನೋಡಿ ಗುರುತಿಸಿರುತ್ತೇನೆ. ಇನ್ನು ಕೆಲವು ಇರುವುದಿಲ್ಲ ಎಂದರೆ ಸರಿ. ತೂಕ ಮಾಡುವ ಯಂತ್ರದಿಂದ ಸದರಿ ಕಳ್ಳತನವಾದ ಬಂಗಾರವನ್ನು ತೂಕ ಮಾಡಿ ಅಂದಾಜು 65-70 ಗ್ರಾಂ ಇರಬಹುದು ಎಂದು ತಿಳಿಸಿರುತ್ತೇನೆ. ಎಲ್ಲಾ ಒಡವೆಗಳನ್ನು ಬೇರೆ ಬೇರೆ ತೂಕ ಮಾಡಿದ್ದು, ಅದರ ತೂಕವನ್ನು ಈಗ ಹೇಳಲು ಬರುವುದಿಲ್ಲ. ಪೊಲೀಸರು ಮಾಡಿದ ಬರವಣಿಗೆಗೆ ನಾನು ಯಾವುದೇ ಸಹಿ ಮಾಡಿರುವುದಿಲ್ಲ. ಸದರಿ ಘಟನೆ ಬಗ್ಗೆ ನನಗೆ ಯಾವುದೇ ಮಾಹಿತಿ ಇರುವುದಿಲ್ಲ. ಪೊಲೀಸರ ಕೋರಿಕೆಯ ಮೇರೆಗೆ ಬಂಗಾರದವನ್ನು ಪರಿಶೀಲಿಸಿರುತ್ತೇನೆ.

**<u>ಮರುವಿಚಾರಣೆ</u>:** ಇರುವುದಿಲ್ಲ.

**(ತೆರೆದ ನ್ಯಾಯಾಲಯದಲ್ಲಿ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)**

ಓ. ಕೇ. ಸ. ಇ. ಎ. ಒ.

ಸಹಿ/-

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು

**ಪ್ರ.ದ.ನ್ಯಾ.ದಂ.ರವರು,ತರೀಕೆರೆ.**